ದಿನಾಂಕಃ 04-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ವಾದಿ ಪರ ವಕೀಲರಿಂದ,

1) ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ವಾದಿಯರು ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿರುತ್ತಾರೆ. ವಾದಿಯರ ತಂದೆ ಹೊನ್ನಪ್ಪ ರವರು ನನಗೆ ಗೊತ್ತಿರುತ್ತಾರೆ. ದಾವಾ ಸ್ವತ್ತುಗಳು ಹೊನ್ನಪ್ಪ ರವರ ಪಿತ್ರಾರ್ಜಿತ ಆಸ್ತಿ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಹೊನ್ನಪ್ಪ ರವರ ಸ್ವಯಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ಹೊನ್ನಪ್ಪ ರವರ ಮಕ್ಕಳ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

2) ಸರ್ವೇ ನಂ. 198/2 ಎ ರಲ್ಲಿ 1 ಎಕರೆ 7 ಗುಂಟೆ ಮತ್ತ ಸರ್ವೇ ನಂ. 198/2 ಬಿ 22 ಗುಂಟೆ ವಿಸ್ತೀರ್ಣ ಇರುತ್ತದೆ. ಹೊನ್ನಪ್ಪ ರವರು ಆರ್ಥಿಕವಾಗಿ ಚೆನ್ನಾಗಿದ್ದರು ಎಂದರೆ ಸರಿ. ಹೊನ್ನಪ್ಪ ರವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ದಾವಾ ಐಟಂ ನಂ. 01 ಆಸ್ತಿಯ ಚೆಕ್ಕು ಬಂದಿಃ ಪಶ್ಚಿಮಕ್ಕೆ ಚೀರನಹಳ್ಳಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ಆಸ್ತಿಯ ದಕ್ಷಿಣಕ್ಕೆ ರೈಸ್ ಮಿಲ್ ಕಟ್ಟಡ ಇದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಜೋಳ ಬೆಳೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಒಂದು ಭಾವ ಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿರುವ ಕಟ್ಟಡವನ್ನು ಒಪ್ಪಿಕೊಂಡ ಕಾರಣ ಸದರಿ ಭಾವಚಿತ್ರವನ್ನು **ನಿಶಾನೆ.ಪಿ-27 ಎಂದು ಗುರುತಿಸಲಾಯಿತು**. ಸದರಿ ಆಸ್ತಿಯಲ್ಲಿ ವಾದಿಗಳು ಜೋಳ ಬೆಳೆದಿರುತ್ತಾರೆ ಎಂದರೆ ಸಾಕ್ಷಿಯು ನಾನು ಬೆಳೆದಿರುತ್ತೇನೆ ಎಂದು ನುಡಿಯುತ್ತಾರೆ.

3) ದಾವಾ ಐಟಂ ನಂ. 1 ಆಸ್ತಿಯ ಈಗಲೂ ಸಹ ಕೃಷಿ ಭೂಮಿಯಾಗಿ ಉಳಿದುಕೊಂಡಿರುತ್ತದೆ ಎಂದರೆ ಸರಿಯಲ್ಲ. ನಾನು ಕಂದಾಯ ಮತ್ತು ಪಂಚಾಯತಿ

ಅಧಿಕಾರಿಗಳೊಂದಿಗೆ ಶಾಮಿಲಾಗಿ ಭೂ-ಪರಿವರ್ತನೆ ದಾಖಲೆಗಳನ್ನು ಸೃಷ್ಟಿಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರಗಳಂತೆ ನನಗೆ ದಾವಾ ಸ್ವತ್ತು ಸಂಖ್ಯೆ 1 ಸ್ವಾಧೀನ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

4) ನನ್ನ ತಂದೆ ಸದರಿ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಳ್ಳುವಾಗ ವಾದಿಗಳಿಗೆ ತಿಳಿಸಿರುತ್ತಾರೆ. ಈ ಸಂಬಂಧವಾಗಿ ಯಾವುದೇ ದಾಖಲೆ ಇರುವುದಿಲ್ಲ. ದಾವಾ ಐಟಂ ನಂ. 1 ಆಸ್ತಿಯು ವಾದಿಗಳ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿ ಆಗಿರುವುದರಿಂದ ವಾದಿಗಳಿಗೆ ಭಾಗಾಂಶ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಮೃತ ಸ್ವಾಮಿ ರವರು ನನ್ನ ತಂದೆಗೆ ಕಾನೂನು ಬಾಹಿರವಾಗಿ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೃತ ಸ್ವಾಮಿ ರವರಿಗೆ ತನ್ನ ತಂದೆ ಹೊನ್ನಪ್ಪ ರವರಿಂದ ಕಾನೂನು ಬದ್ಧವಾಗಿ ಸದರಿ ಆಸ್ತಿ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹೊನ್ನಪ್ಪ ರವರಿಂದ ಸ್ವಾಮಿ ರವರಿಗೆ ಕ್ರಯ ಆಗಿರುತ್ತದೆ. ಹೊನ್ನಪ್ಪ ರವರಿಂದ ಸ್ವಾಮಿ ರವರಿಗೆ ಯಾವುದೇ ಕ್ರಯ ಆಗಿರುವುದಿಲ್ಲ ಆದರೂ, ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಾಲೂ ದಾವಾ ಐಟಂ ನಂ. 1 ಆಸ್ತಿಯಲ್ಲಿ ಹೊನ್ನಪ್ಪ ರವರ ಮಕ್ಕಳು ಜಂಟಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಕಾನೂನು ಬದ್ಧ ಅವಶ್ಯಕತೆ ಇಲ್ಲದೆ ಇದ್ದರೂ ಸಹ ಸ್ವಾಮಿ ರವರು ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5) ದಾವಾ ಐಟಂ ನಂ. 1 ಆಸ್ತಿಯಲ್ಲಿ ಮನೆ ಇರುವುದಿಲ್ಲ. ನಾನು ಸುಳ್ಳು ತಕರಾರು ಸಲ್ಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾಮಿ ರವರು ನನ್ನ ತಂದೆಗೆ ಕ್ರಯ ಪತ್ರ ಬರೆದುಕೊಡುವ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ